www.ecourtsindia.com



**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

***ಸಿ.ಸಿ. ಸಂಖ್ಯೆ ಃ 809/2016***

***ಚಾಸಾ ಃ 2***

***ಪ್ರಾಸಾ ಃ 1***

| | | |
|---|---|---|
| **ಹೆಸರು** | ಃ | ಟಿ ಆರ್ ಶ್ರೀನಿವಾಸ್ |
| **ತಂದೆಯ ಹೆಸರು** | ಃ | ಟಿ ಎಸ್ ರಾಜಶೆಟ್ಟಿ |
| **ವಯಸ್ಸು** | ಃ | 65 ವರ್ಷ |
| **ಉದ್ಯೋಗ** | ಃ | ತರಕಾರಿ ವ್ಯಾಪಾರ |
| **ವಾಸಸ್ಥಳ** | ಃ | ಅರಸು ನಗರ |

**ದಿನಾಂಕ ಃ *22-05-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

***ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದ.***

ಚಾಸಾ-1 ಹಾಗೂ 3 ರವರ ಪರಿಚಯವಿರುತ್ತದೆ. ಚಾಸಾ-1 ರವರು ಈಗಾಗಲೇ ಮರಣ ಹೊಂದಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಕಳ್ಳತನವಾಗಿರುವುದಿಲ್ಲ ಹಾಗೂ ನಾನು ಯಾವುದೇ ಕಳ್ಳತನ ಮಾಡಿರುವುದನ್ನು ನೋಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಒಂದು ಫ್ಯಾನ್ ಹಾಗೂ ಪ್ಲಾಸ್ಟಿಕ್ ಡಬ್ಬವನ್ನು ಈ ಮೊದಲು ನೋಡಿರುವುದಿಲ್ಲ. ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.

**(ಈ ಹಂತದಲ್ಲಿ ಸ. ಸ. ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ದಿನಾಂಕ 15-09-2014 ರಂದು ಬೆಳಿಗ್ಗೆ ಸುಮಾರು 9 ಗಂಟೆಗೆ ನಾನು ನನ್ನ ತರಕಾರಿ ಅಂಗಡಿಗೆ ಬಂದು ವ್ಯಾಪಾರ ಮಾಡಿಕೊಂಡಿರುವಾಗ ನನ್ನ ಅಂಗಡಿಯ ಪಕ್ಕದ ಚಿನ್ನದ ಅಂಗಡಿಯ ಮಾಲೀಕರಾದ ಚಾಸಾ-1 ರವರು ಬಂದು ಅವರ ಅಂಗಡಿಯನ್ನು ತೆರೆದು ನೋಡಲಾಗಿ, ಯಾರೋ ಕಳ್ಳರು ಅವರ ಅಂಗಡಿಗೆ ನುಗ್ಗಿ ಕಳ್ಳತನ ಮಾಡಿರುವುದಾಗಿ

This is a True Copy of the Court Records Online. Authenticated @ districts.ecourtsindia.com/cnr/KAKD520013832016/truecopy/order-1.pdf

ವಿಷಯ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಹಾಗೂ ಚಾಸಾ-3 ರವರು ಅವರ ಅಂಗಡಿಯ ಒಳಗಡೆ ಹೋಗಿ ನೋಡಿದಾಗ ಅಂಗಡಿಯ ಶೋಕೇಸ್ ಹಾಗೂ ಲಾಕರ್ ನ ಮಧ್ಯಭಾಗದಲ್ಲಿ ಖಾಲಿ ಪ್ಲಾಸ್ಟಿಕ್ ಪೆಟ್ಟಿಗೆಗಳು ಬಿದ್ದಿದ್ದು, ಎಲ್ಲಾ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ಅಂಗಡಿಯ ಒಳಗೆ ಫ್ಯಾನ್ ನ್ನು ಅಳವಡಿಸಿದ್ದ ಜಾಗದಲ್ಲಿ ರಂಧ್ರವಾಗಿದ್ದು, ಫ್ಯಾನ್ ಕೆಳಗೆ ಬಿದ್ದಿರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಕಳ್ಳರು ಹಿಂಭಾಗದಲ್ಲಿ ಹೆಂಚನ್ನು ತೆಗೆದು ಒಳಗೆ ನುಗ್ಗಿ, ಮರದ ಏಣಿಯ ಮೂಲಕ, ಮಹಡಿಯ ಮೇಲೆ ಹತ್ತಿ, ಅಲ್ಲಿ ಶೀಲಿಂಗ್ ನ ಮೇಲೆ ಹಾಕಿದ್ದ, ಮರದ ಹಲಗೆಯನ್ನು ತೆಗೆದು ಫ್ಯಾನ್ ಅಳವಡಿಸಿದ ಜಾಗದಲ್ಲಿ ಇಟ್ಟಿಗೆಯನ್ನು ತೆಗೆದು ರಂಧ್ರ ಮಾಡಿ, ಆ ಮೂಲಕ ಒಳಗೆ ನುಗ್ಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಈ ಬಗ್ಗೆ ಚಾಸಾ-1 ರವರನ್ನು ವಿಚಾರಿಸಿದಾಗ 3 ಕೆಜಿ ತೂಕದ 60 ಜೊತೆ ಬೆಳ್ಳಿಯ ದೊಡ್ಡವರ ಕಾಲು ಚೈನ್, 12 ಜೊತೆ ಕರಿಮಣಿ ಪೋಣಿಸಿರುವ ಮಕ್ಕಳ ಕಾಲು ಚೈನ್, ಬೆಳ್ಳಿಯ 50 ಕಾಲು ಚೈನ್ ಕೊಂಡಿಗಳು, ಬೆಳ್ಳಿಯ 8 ಸಿಂಗಲ್ ಕಡಗಗಳು, 2 ಪ್ಲೇನ್ ಕಡಗಗಳು, ಬೆಳ್ಳಿಯ ಕಾಲುಂಗುರ, 5 ಜೊತೆ  ಸ್ಟೋನ್ ಕಾಲುಂಗುರ, ಬೆಳ್ಳಿಯ 20 ಚೈನ್ ಗಳು, 10 ಬೆಳ್ಳಿಯ ರೋಪ್ ಚೈನ್ ಗಳು, ಬೆಳ್ಳಿಯ 10 ಪೆಂಡೆಂಟ್ ಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ದಿನಾಂಕ 16-09-2014 ರಂದು ಪೋಲಿಸರಿಗೆ " ದಿನಾಂಕ 14-09-2014 ರಂದು ------------------------------------------------------------------------------ --------------------------------- ಮಾಹಿತಿಯನ್ನು ನೀಡಿರುತ್ತೇನೆ."  (ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ) ಎಂಬಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ*1* ಎಂದು ಗುರುತಿಸಲಾಯಿತು. ನಂತರ ದಿನಾಂಕ 30-07-2016 ರಂದು ಚಾಸಾ-*1* ರವರು ನನ್ನನ್ನು ಹಾಗೂ ಚಾಸಾ-*3* ರವರನ್ನು ಮಡಿಕೇರಿಯ ಡಿಸಿಐಬಿ ಕಛೇರಿಗೆ ಕರೆದುಕೊಂಡು ಹೋಗಿ ಚಾಸಾ-*1* ರವರ ಚಿನ್ನದ ಅಂಗಡಿಯಲ್ಲಿ ಕಳ್ಳತನವಾಗಿದ್ದ ಬೆಳ್ಳಿಯ ಆಭರಣಗಳನ್ನು ಪೋಲಿಸರು ನಮಗೆ ತೋರಿಸಿ ಹಾಗೂ ಕಳ್ಳತನ ಮಾಡಿದ *1* ರಿಂದ *3* ನೇ ಆರೋಪಿಗಳನ್ನು ತೋರಿಸಿದ್ದು, ನಾವು ಸದರಿ ಕಳ್ಳತನವಾದ ಬೆಳ್ಳಿಯ ಆಭಾರಣಗಳನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಬಗ್ಗೆ  ಅದೇ ದಿನ ಅಂದರೆ ದಿನಾಂಕ ***30-07-2014*** ರಂದು ಪೋಲಿಸರ

This is a True Copy of the Court Records Online. Authenticated @ districts.ecourtsindia.com/cnr/KAKD520013832016/truecopy/order-1.pdf

ಮುಂದೆ " ದಿನಾಂಕ 14-09-2014 ರಂದು

ನೋಡಿದರೆ ಗುರುತಿಸುತ್ತೇನೆ." (ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ) ಎಂಬಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ*2* ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದು, ನಂತರ ನಿಪಿ 1 ಹಾಗೂ 2 ರಂತೆ ಆ ಬಗ್ಗೆ ಹೇಳಿಕೆ ನೀಡಿದ್ದರೂ ಸಹ, ಆರೋಪಿಗಳಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯಯನ್ನು ನುಡಿಯುತ್ತೇನ ಎಂದರೆ ಸರಿಯಲ್ಲ.

**ಪಾಟಿ ಸವಾಲು : *1* ರಿಂದ *3* ನೇ ಆರೋಪಿಗಳ ಪರ ವಕೀಲರಿಂದ :**

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-

(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.

This is a True Copy of the Court Records Online. Authenticated @ districts.ecourtsindia.com/cnr/KAKD520013832016/truecopy/order-1.pdf

www.ecourtsindia.com